### ನೇಪಾಳದ ಪರಿಚಯವಾಯ್ತು

‘ನೇಪಾಳ; ಅಪೂರ್ವ ಭೂದೃಶ್ಯಗಳ ಶೃಂಗಮೇಳ’ (ಫೆ.2, ಡಿ.ಎನ್. ರಾಮಸ್ವಾಮಿ) ಪ್ರವಾಸ ಲೇಖನ ಮಾಹಿತಿಪೂರ್ಣವಾಗಿದೆ. ನೇಪಾಳಕ್ಕೆ ಹೇಗೆ ಹೋಗಬೇಕು, ಯಾವುದು ಸೂಕ್ತ ಮಾರ್ಗ ಎಂಬಿತ್ಯಾದಿ ಮಾಹಿತಿಯನ್ನು ನೀಡಿರುವುದು ಉಪಯುಕ್ತ. ನೇಪಾಳದ ಸ್ಥೂಲ ಪರಿಚಯವಾದಂತಾಯಿತು.

–ಧಾತ್ರಿ, ಚಿಕ್ಕಬಳ್ಳಾಪುರ

### ಸಂಗ್ರಹಯೋಗ್ಯ ಮಾಹಿತಿ

ನೇಪಾಳ ಯಾತ್ರೆ ಕುರಿತ ಲೇಖನ ಉತ್ತಮವಾಗಿ ಮೂಡಿಬಂದಿದೆ. ನೇಪಾಳಕ್ಕೆ ಹೋಗಿ ಬರುವ ಮಾರ್ಗ ಮತ್ತು ಟೂರಿಸ್ಟ್ ಪ್ಯಾಕೇಜುಗಳ ವಿವರ,



ಸ್ಥಳೀಯ ಬೆಲೆ, ಸೌಲಭ್ಯಗಳು, ಇವುಗಳೊಂದಿಗೆ ನೇಪಾಳದಲ್ಲಿ ನೋಡಿದ ಸ್ಥಳಗಳ ವಿವರಣೆ ಚೆನ್ನಾಗಿದೆ. ಕರುನಾಡಿನಿಂದ ನೇಪಾಳ ಯಾತ್ರೆ ಮಾಡುವ ಪ್ರವಾಸಿಗರಿಗೆ ಸಂಗ್ರಹಯೋಗ್ಯ ಲೇಖನ.

–ವಸಂತ ಬಿ.ಎಸ್., ಭದ್ರಾವತಿ

### ಸುಂದರ ಕಥಾ ನಿರೂಪಣೆ

‘ಕನಸಲ್ಲಿ ಕಂಡ ಮುಖ’ (ಫೆ.2, ಕಂನಾಡಿಗಾ ನಾರಾಯಣ) ಕಥೆ ಸುಂದರವಾಗಿದೆ. ಚಿತ್ರಕ್ಕೆ ಬಳಸಿರುವ ಕಲಾಕೃತಿಯೂ ಒಪ್ಪುವಂತಿದೆ.

–ಟಿ.ಪಿ. ಅಶೋಕ್ ಕುಮಾರ್, ಬೆಂಗಳೂರು

‘ಕನಸಲ್ಲಿ ಕಂಡ ಮುಖ’ ಕಥೆ ತುಂಬಾ ಚೆನ್ನಾಗಿದೆ. ಕಥೆಯ ಓಘ, ಕಲಾವಿದನ ಉದ್ವೇಗ, ತೊಳಲಾಟಗಳು ಚೆನ್ನಾಗಿ ನಿರೂಪಿತವಾಗಿವೆ.

–ದಿವ್ಯಶ್ರೀ, ಸಕಲೇಶಪುರ

### ಉಪಯುಕ್ತ ಮರಗಳ ಕಥೆ

‘ಮರಗಳ ಕಥೆ’ ಮಾಲಿಕೆ ಚೆನ್ನಾಗಿ ಮೂಡಿ ಬರುತ್ತಿದೆ. ವಿವಿಧ ಮರಗಳು, ಅವುಗಳು ಮನುಕುಲಕ್ಕೆ, ಪರಿಸರಕ್ಕೆ ಹೇಗೆ ಮುಖ್ಯ ಎಂಬುದರ ಬಗ್ಗೆ ವಿನು ಗಂಗೆಯವರು ಅವಶ್ಯಕ ಮಾಹಿತಿ ನೀಡುತ್ತಿದ್ದಾರೆ. ಇಂಥ ಇನ್ನಷ್ಟು ಮರಗಳ ಪರಿಚಯವಾಗಲಿ.

–ಶಶಿ

### ಗೂಗಿಯವರ ಇನ್ನಷ್ಟು ಕಥೆ ಬರಲಿ

‘ಮುಗುಮೊ’ (ಜ.26, ಅನುವಾದ: ಎಂ.ಎಸ್. ರಘುನಾಥ್) ಕಥೆಯ ಮೂಲ ಲೇಖಕ ‘ಗೂಗಿ ವಾ ಥಿಯಾಂಗ್’ ಆಫ್ರಿಕಾದ ಪ್ರಭಾವಿ ಬರಹಗಾರ. ಆಫ್ರಿಕಾ ಜನತೆಯನ್ನು ಪಾಶ್ಚಾತ್ಯರಾಗಲಿ, ತಮ್ಮ ಸರ್ವಾಧಿಕಾರಿಗಳಾಗಲಿ ಶೋಷಿಸಿದ ವ್ಯಥೆಯನ್ನು ತಮ್ಮ ಬರವಣಿಗೆ ಮೂಲಕ ಲೋಕಮಾನಸಕ್ಕೆ ತಟ್ಟುವಂತೆ ಅಭಿವ್ಯಕ್ತಿಸಿದವರು. ಶೋಷಿತರ ಹತಾಶೆ, ದೌರ್ಬಲ್ಯಗಳನ್ನು ಮನಮುಟ್ಟುವಂತೆ ಬರೆವ ಗೂಗಿ ಅವರ ಇತರ ಕಥೆಗಳೂ ಅನುವಾದಗೊಳ್ಳಲಿ.

– ರಾಮಚಂದ್ರ ಎಂ.ಆರ್., ಬೆಂಗಳೂರು

### ಮುದ ನೀಡಿದ ‘ನಿಮ್ಮ ಪುಟ’

ಫೆ.2ರ ಸಂಚಿಕೆಯ ‘ನಿಮ್ಮ ಪುಟ’ದಲ್ಲಿ ಪ್ರಕಟವಾದ ‘ಕಳ್ಳಿಪೀರನ ಮಣ್ಣಿನ ಸ್ನಾನ’ ಲೇಖನ, ಚಿತ್ರ ನೋಡಿ ಅಚ್ಚರಿಯಾಯಿತು. ಮಣ್ಣಿನಲ್ಲಿ ಸ್ನಾನ ಮಾಡುವ ಈ ಹಕ್ಕಿಗಳನ್ನು ಕಂಡು ಖುಷಿ ಎನಿಸಿತು.

–ಉಷಾ ಸೋಗಲ್, ತುರಹಳ್ಳಿ



### ಭಲೇ ಬೋಯಿಂಗ್

‘ಬಾನ ದಾರಿಯಲ್ಲಿ ಜಾರಿಹೋದ ಜಂಬೋ ಜೆಟ್’ (ಫೆ.2, ಡಾ. ಬಿ.ಆರ್. ಗುರುಪ್ರಸಾದ್) ಮುಖಪುಟ ಲೇಖನ ಮಾಹಿತಿಭರಿತವಾಗಿದೆ. ‘ಆಗಸದ ರಾಣಿ’ ಎಂದೇ ಕರೆಸಿಕೊಂಡಿದ್ದ ಬೋಯಿಂಗ್ 747 ನಡೆದುಬಂದ ಹಾದಿಯನ್ನು ಸರಳವಾಗಿ ತೆರೆದಿಟ್ಟಿದೆ. ಬೋಯಿಂಗ್ ಇತಿಹಾಸ ಓದಿ ಭಲೇ ಎನ್ನುವಂತಾಯಿತು.

–ಸುಹಾಸಿನಿ, ಧಾರವಾಡ

### ಹೆಮ್ಮೆ ಮೂಡಿತು

ಬೋಯಿಂಗ್ 747 ಇತಿಹಾಸದೊಂದಿಗೆ ವಾಯುಯಾನದ ಹಿನ್ನೆಲೆಯನ್ನೂ ತೆರೆದಿಟ್ಟಿದೆ ‘ಬಾನ ದಾರಿಯಲ್ಲಿ ಜಾರಿ ಹೋದ ಜಂಬೋ ಜೆಟ್’ ಲೇಖನ.

ವಿಮಾನ ಪಯಣವನ್ನು ಜನಸಾಮಾನ್ಯರ ಕೈಗೆಟುಕುವಂತೆ ಮಾಡಿದ ಬೋಯಿಂಗ್ 747 ಹಿನ್ನೆಲೆ ತಿಳಿದು ಹೆಮ್ಮೆಯಾಯಿತು. ಈ ವಿಮಾನದ ಹಿಂದೆ ಎಷ್ಟೊಂದು ಆಸಕ್ತಿಕರ ವಿಷಯಗಳಿವೆ ಎನಿಸಿತು.

–ಗಿಂಡಿಮನೆ ಮೃತ್ಯುಂಜಯ

## ಅಜ್ಜನ ಚರಕ ನೆನಪಾಯಿತು

‘ನೂಲುಧ್ಯಾನ: ಮೈ ಮನಗಳ ಸ್ವಸ್ಥಗೊಳಿಸುವುದು, ಮನಸುಗಳನ್ನು ಕೂಡಿಸುವುದು’ (ಫೆ.2, ಡಾ. ಸಂಜೀವ ಕುಲಕರ್ಣಿ) ಲೇಖನ ಅತ್ಯುತ್ತಮವಾಗಿದೆ. ಇಂದಿನ ಬದಲಾದ ಪರಿಸ್ಥಿತಿಯಲ್ಲಿಯೂ ಚರಕದಲ್ಲಿ ನೂಲು ನೇಯ್ದು ತಮ್ಮ ಅಗತ್ಯದ ಬಟ್ಟೆ ನೇಯಿಸಿಕೊಂಡು ತನ್ಮೂಲಕ ಸಂಬಂಧಪಟ್ಟ ಶ್ರಮಜೀವಿಗಳಿಗೆ ಆರ್ಥಿಕವಾಗಿ ಏಳಿಗೆ ಹೊಂದಲು ತಕ್ಕಮಟ್ಟಿಗೆ ಪ್ರಯತ್ನಪಡುವ ಲೇಖಕರದು ಶ್ಲಾಘನೀಯ ಕಾರ್ಯ. ಲೇಖನ ಓದಿ ಸ್ವಾತಂತ್ರ್ಯ ಹೋರಾಟಗಾರರಾದ ನನ್ನ ಅಜ್ಜ ಚರಕದಲ್ಲಿ ನೂಲುವ ದೃಶ್ಯ ಹಾಗೂ ಅವರು ಜತನವಾಗಿ ಕಾಪಿಟ್ಟುಕೊಂಡಿದ್ದ ರಾಷ್ಟ್ರಧ್ವಜ ನೆನಪಾಯಿತು.

–ರಶ್ಮಿ ಶ್ರೀನಿವಾಸ, ಬೆಂಗಳೂರು



### ಮನಸ್ಸನ್ನು ಸ್ವಸ್ಥಗೊಳಿಸಿದ ಲೇಖನ

‘ನೂಲುಧ್ಯಾನ’ ಲೇಖನ ನಿಜಕ್ಕೂ ಮನಸ್ಸನ್ನು ಸ್ವಸ್ಥಗೊಳಿಸಿತು. ‘ಚರಕ’ ಎನ್ನುವ ನುಡಿಯೇ ಆಪ್ಯಾಯಮಾನವಾದದ್ದು. ದೊಡ್ಡ ದೊಡ್ಡ ಸಮಸ್ಯೆಗಳನ್ನು ಪರಿಹರಿಸಲಾಗದಿದ್ದರೂ ಕೈಲಾದ ಮಟ್ಟಿಗೆ ಒಂದಷ್ಟು ಸಹಾಯ ಮಾಡುವುದು ತುಂಬಾ ಶ್ರೇಷ್ಠವಾದದ್ದು. ದಿನವೂ ಅರ್ಧ ತಾಸು ನೂಲು ತೆಗೆದರೆ ಹಳ್ಳಿಯಲ್ಲಿ ಒಂದು ರೈತ ಕುಟುಂಬದಲ್ಲಿ ರೊಟ್ಟಿ ಬೇಯುತ್ತದೆ ಎನ್ನುವ ಭಾವದ ಲೇಖಕರ ವಿಚಾರ ತುಂಬಾ ಅರ್ಥಪೂರ್ಣ.

–ತಾರಾ ಹೆಗಡೆ, ಶಿರಸಿ

### ‘ನೂಲುಧ್ಯಾನ’ವೆಂಬ ಹೊಸ ಪರಿಕಲ್ಪನೆ

‘ನೂಲುಧ್ಯಾನ’ ಲೇಖನ ಹೊಸ ಪರಿಕಲ್ಪನೆಯನ್ನು ಪರಿಚಯಿಸಿದೆ. ಈ ಆಧುನಿಕ ಕಾಲದಲ್ಲಿ ‘ನೂಲುಧ್ಯಾನ’ವನ್ನು ಏಕೆ ಮಾಡಬೇಕು ಎಂಬುದನ್ನು ಲೇಖಕರು ಮೂರು ಆಯಾಮಗಳಲ್ಲಿ ವಿವರಿಸಿರುವುದು ಉಪಯುಕ್ತವಾಗಿದೆ. ನೂಲುಧ್ಯಾನ ಈಗಿನ ಅಗತ್ಯವೂ ಆಗಿದೆ ಎಂಬುದನ್ನು ಲೇಖನ ಮನದಟ್ಟುಮಾಡಿದೆ.

–ಆನಂದ ಸಿಂಧಗಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in